ಅಧ್ಯಕ್ಷರು : ಇದೇನಿದು? ತಾವು ಇದರ ಬಗ್ಗೆ ಮೆನ್‌ಷನ್ ಮಾತ್ರ ಮಾಡುತ್ತೇನೆಂದು ಹೇಳಿದಿರಿ, ಅದರಂತೆ ಸರ್ಕಾರದ ಗಮನ ಸೆಳೆದಿದ್ದೀರಿ, ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಕುಳಿತುಕೊಳ್ಳಿ. ಈ ರೀತಿಯಾದರೆ ಸದನ ನಡೆಸಲು ಸಾಧ್ಯವಾಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಸದನದ ಕಲಾಪಕ್ಕೆ ಅಡ್ಡಿ ಮಾಡಬೇಕು ಎಂಬ ಉದ್ದೇಶ ನಮಗೆ ಇಲ್ಲ.

ಅಧ್ಯಕ್ಷರು : ಇದು ಕಲಾಪಕ್ಕೆ ಅಡ್ಡಿ ಮಾಡಿದಂತೆಯೇ. ತಾವು ಗಮನ ಸೆಳೆಸಿದ್ದೀರಿ, ಆದ್ದರಿಂದ ದಯಮಾಡಿ ಕುಳಿತುಕೊಳ್ಳಬೇಕು. ಅದಕ್ಕೆ ಸರ್ಕಾರ ಸೂಕ್ತವಾದ ಉತ್ತರವನ್ನು ಕೊಡುತ್ತದೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ತಾವು ದಯಮಾಡಿ ಇದಕ್ಕೆ ಸಮಯವನ್ನು ನಿಗದಿ ಮಾಡಿ. ಇವತ್ತು 2000 ಇಸವಿ ಮೇ ಒಳಗಾಗಿ 'ಏ' ಸ್ಕೀಮ್‌ನಲ್ಲಿ ಬರತಕ್ಕ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿತ್ತು. ಆದರೆ ಇದುವರೆಗೆ ಮಾಡಿಕೊಳ್ಳಲು ಆಗಿಲ್ಲ. 6 ಲಕ್ಷದ 22 ಸಾವಿರ ಹೆಕ್ಟರ್ ನೀರಾವರಿಯಾಗಬೇಕಾಗಿತ್ತು. ಇದುವರೆಗೆ ಕೇವಲ 4 ಲಕ್ಷದ 65 ಸಾವಿರ ಹೆಕ್ಟರ್ ಮಾತ್ರ ಆಗಿ ಇನ್ನೂ ಒಂದೂವರೆ ಲಕ್ಷ ಹೆಕ್ಟೇರ್ ಭೂಮಿಯ ನೀರಾವರಿಯಾ ೀಕು. ಯಾರು 173 ಹಳ್ಳಿಗಳನ್ನು ಮುಳುಗಿಸಿಕೊಂಡಿದ್ದಾರೆ, ಯಾರು 3 ಲಕ್ಷ 50 ಸಾವಿರ ಹೆಕ್ಟೇರ್ ಭೂಮಿಯನ್ನು ಕಳೆದುಕೊಂಡಿದ್ದಾರೆ ಅಂಥವರಿಗೆ ಆಗಬೇಕಾದಂಥ ಯೋಜನೆ ಒಂದು ಪರ್‌ಸೆಂಟ್ ಸಹ ಉಪಯೋಗವಾಗಿಲ್ಲ. ಅದರ ಬಗ್ಗೆ ನಿರ್ಲಕ್ಷವಾಗಿದೆ. ಅದರ ಬಗ್ಗೆ ವಿವರವಾಗಿ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಆಯಿತಲ್ಲಾ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ತಾವು ಸಮಯ ಕೊಟ್ಟರೆ ಸಾಕು.

ಅಧ್ಯಕ್ಷರು : ಆಗಲಿ.

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ : ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯಲ್ಲಿ ರೈತರು ಹತ್ತಿ ಬೆಳೆ ನಾಶವಾಗಿರುವ ಬಗ್ಗೆ ಸುಮಾರು ಹದಿನೈದು ದಿವಸಗಳಿಂದ ಹೋರಾಟವನ್ನು ನಡೆಸಿದ್ದಾರೆ.

ಅಧ್ಯಕ್ಷರು : ಇದೇನಿದು? ಈ ರೀತಿ ಎಲ್ಲಾ ನಿಂತುಕೊಂಡು ಮಾತನಾಡಿದರೆ ಈ ಸದನದ ನಿಯಮಾವಳಿಗಳೇನು?

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ : ಇದು ಜಠಿಲವಾದಂಥ ಸಮಸ್ಯೆಯಾಗಿದೆ. ದಯವಿಟ್ಟು ಇದನ್ನು ಅತ್ಯಂತ...

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ, ಈಗ ಪ್ರಶ್ನೋತ್ತರಗಳು.

2. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು : ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಎಂದು ಮುದ್ರಿತವಾಗಿದೆ. ಒಳಚರಂಡಿ ಯೋಜನೆ ವಿಚಾರ ಪೌರಾಡಳಿತ ಸಚಿವರಿಗೆ ಸಂಬಂಧಪಡುತ್ತದೆ. ಆದ್ದರಿಂದ ಆ ಸಚಿವರು ಬಂದಾಗ ಉತ್ತರ ಕೊಡಿಸೋಣ.

ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ : ಮಾನ್ಯ ಮುಖ್ಯಮಂತ್ರಿಗಳೇ, ಉತ್ತರ ಕೊಡುವುದಾಗಿ ಹೇಳಿದ್ದಾರೆ. ಅವರ ಸಹಿ ಅಬ್ಬಾಗಿದೆ.

ಅಧ್ಯಕ್ಷರು : ಆ ಖಾತೆಯ ಸಚಿವರು ಬರಬೇಕಲ್ಲಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಟೇಬಲ್ ಮೇಲೆ ಉತ್ತರ ಇದ್ದಾಗ ಇದನ್ನು ಮುಂದಕ್ಕೆ ಹಾಕಲು ಬರುವುದಿಲ್ಲ. ಯಾರಾದರೂ ಎದ್ದು ಹೇಳಬೇಕಾಗುತ್ತದೆ. ನಮಗೆ ರಿಪ್ಲೈ ಬಂದಿದೆಯಲ್ಲಾ?

ಅಧ್ಯಕ್ಷರು : ಸಂಬಂಧಪಟ್ಟ ಸಚಿವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೆ ರಿಪ್ಲೈ ಬಂದಿದೆ. ಆದ್ದರಿಂದ ಯಾರಾದರೂ, ಒಬ್ಬರು ಹೇಳಬೇಕಾಗುತ್ತದೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಇದನ್ನು ಕೊನೆಯಲ್ಲಿ ತೆಗೆದುಕೊಳ್ಳೋಣ.

ಅಧ್ಯಕ್ಷರು : ಅನಂತರ ಸಂಬಂಧಪಟ್ಟ ಸಚಿವರನ್ನು ಕರೆಸಿ ಅವರಿಂದಲೇ ಉತ್ತರ ಕೊಡಿಸೋಣ. ಸದಸ್ಯರು ಸಪ್ಲಿಮೆಂಟರೀಸ್ ಕೇಳಬೇಕಾಗುತ್ತದೆ. ಸಮರ್ಪಕವಾಗಿ ಉತ್ತರ ಕೊಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಸಚಿವರನ್ನು ಅವರನ್ನು ಕರೆಸಿ ಉತ್ತರ ಕೊಡಿಸೋಣ.

ಶ್ರೀ ಎನ್. ಧರ್ಮಸಿಂಗ್ : ಕೊನೆಯಲ್ಲಿ ತೆಗೆದುಕೊಳ್ಳೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಟ್ಟಿನಲ್ಲಿ ಇದನ್ನು ಡೆಫರ್ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಉತ್ತರ ಬಂದಿರುವುದರಿಂದ ಮುಂದೆ ಹಾಕಲು ಹೋಗಬೇಡಿ, ಅದು ಸರಿಯಲ್ಲ.

ಭಾಲ್ಕಿ ಪಟ್ಟಣದ ಕುಡಿಯುವ ನೀರಿನ ಯೋಜನೆ

18 (415) : ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಈಗ ಯಾವ ಹಂತದಲ್ಲಿದೆ;

2) ಈ ಕಾಮಗಾರಿಗೆ ಇಲ್ಲಿಯವರೆಗೆ ಮಾಡಿದ ವೆಚ್ಚ ಎಷ್ಟು ಮತ್ತು ಬಾಕಿ ಉಳಿದ ಮೊತ್ತ ಎಷ್ಟು;

3) ಈ ಯೋಜನೆಯು ಯಾವಾಗ ಪೂರ್ಣಗೊಳಿಸಬೇಕಾಗಿತ್ತು;

4) ವಿಳಂಬವಾಗಿದ್ದರೆ ಕಾರಣವೇನು;

5) ತ್ವರಿತಗತಿಯಲ್ಲಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುವುದೆ;

6) ಈ ಯೋಜನೆ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು)

1) ಭಾಲ್ಕಿ ಪಟ್ಟಣಕ್ಕೆ ಕಾರಂಜಾ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ರೂ. 603.20 ಲಕ್ಷ ಅಂದಾಜಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯಾಗಿರುತ್ತದೆ. ಸದರಿ ಯೋಜನೆಯಡಿ ಮೂಲ ಸ್ಥಾವರ ನಿರ್ಮಾಣ, ಕಚ್ಚಾ/ಶುದ್ಧ ನೀರು ಏರು ಕೊಳವೆ ಮಾರ್ಗ